ಹೊಸ ದಿಗಂತ

# ಕೆನಡಾ ಪ್ರಾಧ್ಯಾಪಕರಿಂದ ವಿಡಿಐಟಿಗೆ ಭೇಟಿ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳ ಮಹಾವಿದ್ಯಾಲಯಕ್ಕೆ ಕೆನಡಾದ ಸಾಕಚವಾನ್ ವಿಶ್ವವಿದ್ಯಾಲಯದ ಡಾ.ವೆಂಕಟೇಶ್ ಮೇಧಾ ಭೇಟಿ ನೀಡಿದರು.

ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ವೆಂಕಟೇಶ್ ಮೇಧಾ ವಿಡಿಐಟಿಯು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಕೈಗೊಂಡಿರುವ ಉಪಕ್ರಮಗಳ ಕುರಿತು ಮಾಹಿತಿ ಪಡೆದರು. ವಿದ್ಯಾರ್ಥಿಗಳಿಗೆ ಹಚ್ಚಹಸುರಿನ ಪರಿಸರದಲ್ಲಿ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುತ್ತಿರುವ ವಿಡಿಐಟಿಯ ಕಾರ್ಯವನ್ನು ಪ್ರಶಂಸಿಸಿದರು.

ವಿಡಿಐಟಿಯೊಂದಿಗೆ ತಂತ್ರಜ್ಞಾನ ವಿನಿಮಯ, ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ಭೇಟಿ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಪ್ರಾಚಾರ್ಯ ಡಾ. ವಿ.ಎ.ಕುಲಕರ್ಣಿ, ಪ್ರೊ.ಮಂಜುನಾಥ್, ಡಾ.ಆರ್.ಎಸ್. ಮುನ್ನೊಳ್ಳಿ, ಡಾ.ವೆಂಕಟೇಶ್, ಪ್ರೊ. ಹರ್ಷ ಜಾಧವ, ಪ್ರೊ.ರಜತ್ ಆಚಾರ್ಯ, ಪ್ರೊ. ವರಪ್ರಸಾದ್ ಗಾವಂಕರ್, ಪ್ರೊ.ಎಸ್.ಡಿ. ಕುಲಕರ್ಣಿ, ಪ್ರೊ.ಅಲ್ಲಮಪ್ರಭು ಕೊಳಕಿ, ಡಾ. ಗುರುರಾಜ್ ಹತ್ತಿ ಮತ್ತು ಡಾ. ಪೂರ್ಣಿಮಾ ರಾಯ್ಕರ್ ಉಪಸ್ಥಿತರಿದ್ದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ.ಮಹೇಂದ್ರ ದೀಕ್ಷಿತ್ ಈ ಕಾರ್ಯಕ್ರಮ ಆಯೋಜಿಸಿದ್ದರು.



ಲೋಕಧ್ವನಿ

# ಕೆನಡಾ ಪ್ರಾಧ್ಯಾಪಕರಿಂದ ವಿಡಿಐಟಿ ಮಹಾ ವಿದ್ಯಾಲಯ ಭೇಟಿ



**ಹಳಿಯಾಳ:** ಇಲ್ಲಿನ ಕೆಎಲ್‌ಎಸ್‌ವಿಡಿಐಟಿ ಮಹಾವಿದ್ಯಾಲಯಕ್ಕೆ ಕೆನಡಾದ ಸಾಸ್ಕಚೆವಾನ್ ವಿಶ್ವವಿದ್ಯಾಲಯದ ಡಾ. ವೆಂಕಟೇಶ್ ಮೇಧಾ ಮಂಗಳವಾರ ಭೇಟಿ ನೀಡಿದರು.

ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ವೆಂಕಟೇಶ್ ಮೇಧಾ ವಿ ಡಿಐಟಿಯು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಕೈಗೊಂಡಿರುವ ಉಪಕ್ರಮಗಳ ಕುರಿತು ಮಾಹಿತಿ ಪಡೆದರು. ವಿದ್ಯಾರ್ಥಿಗಳಿಗೆ ಹಚ್ಚಹಸುರಿನ ಪರಿಸರದಲ್ಲಿ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುತ್ತಿರುವ ವಿಡಿಐಟಿಯ ಕಾರ್ಯವನ್ನು ಪ್ರಶಂಸಿದರು. ತಾವು ಕಾರ್ಯನಿರ್ವಹಿಸುತ್ತಿರುವ ಕೆನಡಾದ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡಿರುವ ಬೋಧನಾ ಕ್ರಮಗಳನ್ನು ತಿಳಿಸಿದರು.

ವಿಡಿಐಟಿಯೊಂದಿಗೆ ತಂತ್ರಜ್ಞಾನ ವಿನಿಮಯ, ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ಭೇಟಿ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಮಹಾವಿದ್ಯಾಲಯದ ವತಿಯಿಂದ ಡಾ.ವೆಂಕಟೇಶ್ ಮೇಧಾ ಅವರಿಗೆ ಪುರಸ್ಕರಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ, ಡಾ. ವೆಂಕಟೇಶ್ ಅವರು ಶೈಕ್ಷಣಿಕ ಬೆಳವಣಿಗೆಗೆ ನೀಡಿರುವ ಸಲಹೆಗಳನ್ನು ಮಹಾವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರೊ. ಮಂಜುನಾಥ್, ಡಾ. ಆರ್ ಎಸ್ ಮುನ್ನೊಳ್ಳಿ, ಡಾ. ವೆಂಕಟೇಶ್, ಪ್ರೊ. ಹರ್ಷ ಜಾಧವ, ಪ್ರೊ. ರಜತ್ ಆಚಾರ್ಯ, ಪ್ರೊ. ವರಪ್ರಸಾದ್ ಗಾವಂಕರ್, ಪ್ರೊ. ಎಸ್ ಡಿ ಕುಲಕರ್ಣಿ, ಪ್ರೊ. ಅಲ್ಲಮಪ್ರಭು ಕೊಳಕಿ, ಡಾ. ಗುರುರಾಜ್ ಹತ್ತಿ ಮತ್ತು ಡಾ. ಪೂರ್ಣಿಮಾ ರಾಯ್ಕರ್ ಉಪಸ್ಥಿತರಿದ್ದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಕಾರ್ಯಕ್ರಮ ಆಯೋಜಿಸಿದ್ದರು.

Main Edition Edition
Jul 12, 2024 Page No. 2
Powered by: erelego.com